ಇಬ್ಬರೂ ಜೀವ ಸಮಾಧಿಯಾಗಿದ್ದರು. ಹೆಣಗಳನ್ನು ಹೊರತೆಗೆಯಲಾಗದಷ್ಟು ಕಲ್ಲು ಮಣ್ಣುಗಳ ರಾಶಿ ಅವರ ಮೇಲೆ ಆವರಿಸಿಕೊಂಡಿತ್ತು. ಅವರ ಬಗ್ಗೆ ತಿಳಿದುಕೊಳ್ಳುವ ಮುನ್ನವೆ ಇಬ್ಬರನ್ನೂ ಕಳೆದುಕೊಂಡಿದ್ದೆ. ಕ್ಷಣಾರ್ಧದಲ್ಲಿ ಅನಾಥನಾಗಿಹೋಗಿದ್ದೆ. ಅಕ್ಕಪಕ್ಕದ ಜನ ಕರುಣೆ ತೋರಿ, ನನ್ನನ್ನು ಸಂಭಾಳಿಸಿ, ತಂದೆಯದೆ ಜಮೀನಿನಲ್ಲಿ ಕೃಷಿ ಮಾಡಲು ಬೆಂಬಲಿಸಿ ಕೈಹಿಡಿದು ಕಾಪಾಡಿದ್ದರು. ಎಲ್ಲ ರೀತಿಯ ಸಹಾಯ ಕೊಟ್ಟು ಜೀವನ ಕಟ್ಟಿಕೊಳ್ಳಲು ನೆರವಾಗಿ ನಿಂತರು.

ಹೀಗಿರುವಾಗ...

ನನಗಾಗ ಬಹುಶಃ ಸುಮಾರು ಹನ್ನೆರಡು ವರ್ಷ ಇರಬಹುದು.

ಒಂದು ಸಂಜೆ...

ಮನೆಯ ಮುಂದೆ ನನ್ನ ತೋಟದಲ್ಲಿ ಬೆಳೆದ ಬಾರ್ಲಿ ತೆನೆ ಒಣಗಿಸುತ್ತಿದ್ದೆ. ಇದ್ದಕ್ಕಿದ್ದ ಹಾಗೆ, ನಮ್ಮ ಹಳ್ಳಿಯ ಮಕ್ಕಳ ಗುಂಪೊಂದು ಓಡುತ್ತ ಬಂದು ನನ್ನ ಮನೆಗೆ ಭಿಕ್ಕುಗಳ ತಂಡವೊಂದು ಬರುತ್ತಿದೆ ಎಂದಿತು. ಯಾರು, ಯಾಕೆ ಎಂದು ಅರ್ಥವಾಗದೆ ಎದ್ದು ಮನೆಯ ಮುಂದೆ ಬೀದಿಗೆ ಬಂದೆ. ಸುಮಾರು ಇನ್ನೂರು ಅಡಿಗಳ ದೂರದಲ್ಲಿ ಒಬ್ಬ ಭಿಕ್ಕುಣಿ ಇತರೆ ಮೂರು ಭಿಕ್ಕುಗಳೊಂದಿಗೆ ನಡೆದು ಬರುತ್ತಿದ್ದರು. ನೋಡ ನೋಡುತ್ತಿದ್ದಂತೆ ಅವರು ಮನೆಯ ಮುಂದೆ ಬಂದು ನಿಂತರು. ಆ ಭಿಕ್ಕುಣಿ ನನ್ನತ್ತ ನೋಡಿ ನಕ್ಕರು. ಆ ಚಿಕ್ಕ ವಯಸ್ಸಿನಲ್ಲಿ ನನಗೆ ತಿಳಿಯಲಿಲ್ಲವಾದರೂ, ಸುಮಾರು 40–45 ವರ್ಷದವಳು ಎಂದು ಈಗ ಹೇಳಬಲ್ಲೆ. ಮುಖದಲ್ಲಿ ವಯಸ್ಸಿನ ಸುಕ್ಕು ಇನ್ನೂ ಬಂದಿರಲಿಲ್ಲ. ಸುಮಾರು ಐದೂವರೆ ಅಡಿ ಎತ್ತರದ, ನೀಳ ದೇಹ. ಅದೇನೋ ಆಕರ್ಷಣೆ, ಯಾರನ್ನೇ ಆಗಲಿ ಸೋಲಿಸಬಲ್ಲ ನಗು. ಬಳಿ ಬಂದು, ಬಾಗಿ ನನ್ನ ತಂದೆಯ ಹೆಸರು ಹೇಳಿ ಅವರ ಬಗ್ಗೆ ವಿಚಾರಿಸಿದರು. ಅವರು ಸತ್ತುಹೋದರು ಎಂದು ಹೇಳುತ್ತಿದ್ದಂತೆ, ಆಕೆಯ ಮುಖದಲ್ಲಿನ ನಗು ಒಮ್ಮೆಲೆ ಮಾಯವಾಯಿತು. ತಾನು ಕೇಳಿದ್ದನ್ನು ನಂಬಲಾರದವಳಂತೆ ಹಣೆಯನ್ನು ಗಂಟಿಕ್ಕಿ ನನ್ನನ್ನೇ ನೋಡುತ್ತ ಇದ್ದಲ್ಲಿಯೆ ಕುಸಿದಳು. ನೆಲದ ಮೇಲೆ ಕುಳಿತ ಆಕೆಯ ಕಣ್ಣಲ್ಲಿ ನಿಧಾನವಾಗಿ ಹನಿಗಳು ಜಿನುಗುತ್ತಿದ್ದವು. ಆಕೆಯನ್ನೇ ನೋಡುತ್ತ ಏನೂ ಅರ್ಥವಾಗದವನಂತೆ ನಿಂತಿದ್ದೆ.

ಸ್ವಲ್ಪ ಹೊತ್ತು ಹಾಗೆಯೇ ಕೂತಿದ್ದವಳು, ಕಣ್ಣು ಒರೆಸಿಕೊಂಡು ನಾನು ಯಾರೆಂದು ಕೇಳಿದಳು. ನನ್ನ ಪರಿಚಯ ಮಾಡಿಕೊಂಡು ತಂದೆ ತಾಯಿ ಹೇಗೆ ಸತ್ತರೆಂದು ಹೇಳುತ್ತಿದ್ದಂತೆ ಆಕೆಯ ಕಣ್ಣು ತೇವಗೊಂಡಿದ್ದರೂ ಅಲ್ಲಿ ನಗು ಮೂಡಿತು. ತಕ್ಷಣ ಎದ್ದು ಮೊಣಕಾಲುಗಳ ಮೇಲೆ ಕುಕ್ಕರು ಕೂತು ನನ್ನನ್ನು ಬರಸೆಳೆದುಕೊಂಡು ನನ್ನ ಕೆನ್ನೆ ಸವರಿ ಗಲ್ಲ ಹಿಡಿದು ನಿಧಾನವಾಗಿ ನನ್ನ ಬಳಿ ಮುಖ ತಂದು ಒಂದು ಮೆತ್ತನೆಯ ಮುತ್ತು ಕೊಟ್ಟು,

'ನಾನು ಯಾರು ಗೊತ್ತೆ?' ಎಂದಳು. ತಿಳಿಯದು ಎನ್ನುವಂತೆ ತಲೆಯಾಡಿಸಿದೆ.

'ನಾನು ನಿಮ್ಮ ಅಜ್ಜಿ' ಎಂದಳು. ಅದನ್ನು ಕೇಳಿ ನನ್ನಲ್ಲಿ ಒಮ್ಮೆಲೇ ಹಲವು ರೀತಿಯ ಭಾವನೆಗಳು ಕುಣಿದಾಡಿದವು. ನನ್ನವರು ಎನ್ನುವವರು ಯಾರೂ ಇಲ್ಲ ಎಂದು ಭಾವಿಸಿದ್ದ ನನಗೆ ಇದ್ದಕ್ಕಿದ್ದಂತೆ 'ನಾನು ನಿಮ್ಮ ಅಜ್ಜಿ' ಎಂದು ಯಾರೋ ಬಂದು ಹೇಳಿದರೆ, ಕತ್ತಲಲ್ಲಿ ನಿಧಿಯನ್ನು ಎಡವಿಕೊಂಡು ಬಿದ್ದ ಅನುಭವ. ಜೊತೆಗೆ ಈಕೆ ನನ್ನ ಅಜ್ಜಿಯೇ ಆಗಿದ್ದಲ್ಲಿ ಇಷ್ಟು ದಿನ ನನ್ನ ಬಳಿ ಏಕೆ ಬಂದಿರಲಿಲ್ಲ? ಎಲ್ಲಿಗೆ ಬಿಟ್ಟು ಹೋಗಿದ್ದಳು? ಎಂಬ ಹುಸಿಕೋಪ. ಈ ವಿರುದ್ಧ ಭಾವಗಳಲ್ಲಿ ನನ್ನನ್ನು ನಾನೇ ಮರೆತಂತಿದ್ದಾಗ ಆಕೆ ತನ್ನ ಜೊತೆ ಬಂದಿದ್ದ ಭಿಕ್ಕುಗಳಿಗೆ ಏನೋ ಹೇಳಿ ಅವರನ್ನು ದೂರ ಕಳುಹಿಸಿದಳು. ನಂತರ ಮನೆಯ ಮುಂದೆ ಇದ್ದ ಕಲ್ಲಿನ